
# ಸತ್ಸಂಗದಿಂದ ನಿಸ್ಸಂಗ

**ಸ್ವಾಮಿ ನಿತ್ಯಸ್ಥಾನಂದ**

ಆಧ್ಯಾತ್ಮಿಕ ಜೀವನಕ್ಕೆ ಸತ್ಸಂಗವೆಂಬುದು ಅತ್ಯಂತ ಮುಖ್ಯವೆಂಬುದರಲ್ಲಿ ಎರಡು ಮಾತಿಲ್ಲ. ಸತ್ಸಂಗವೆಂಬುದು ಹೇಗೆ ನಿಸ್ಸಂಗದತ್ತ ಸಾಧಕನ್ನು ಕರೆದೊಯ್ಯುವುದು ಎಂಬ ಅಂಶವನ್ನಿಲ್ಲಿ ಹಲವು ದೃಷ್ಟಿಕೋನಗಳಿಂದ ನಿರೂಪಿಸಲಾಗಿದೆ. ಲೇಖಕರು ಈ ಪತ್ರಿಕೆಯ ಮೊದಲ ಸಂಪಾದಕರಾಗಿದ್ದರು . ಪ್ರಸ್ತುತ ಅವರು ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

‘**ಸತ್ಸಂಗತ್ವೇ ನಿಸ್ಸಂಗತ್ವಂ**’ ಎಂಬುದು ಶ್ರೀ ಶಂಕರಾಚಾರ್ಯರ ಪ್ರಸಿದ್ಧವಾದ ಹೇಳಿಕೆ. ಇದರ ಅರ್ಥ ಸತ್ಸಂಗದಿಂದ ನಿಸ್ಸಂಗವುಂಟಾಗುತ್ತದೆ ಎಂಬುದು. ಮನುಷ್ಯನು ಸಂಘಜೀವಿಯಾದುದರಿಂದ ಅವನು ಇತರರ ಸಂಗವನ್ನು ಬಯಸುವುದು ಸ್ವಾಭಾವಿಕ. ಆದರೆ ವ್ಯಕ್ತಿಯು ಯಾವ ಸಂಗವನ್ನೂ ಬಯಸದೆ ತಾನೇತಾನಾಗಿ, ಏಕಾಂಗಿಯಾಗಿ ಆತ್ಮನಿರ್ಭರನಾಗಿ ಇರುವ ಸ್ಥಿತಿಯನ್ನು ತಲುಪಬೇಕು. ಈ ಸ್ಥಿತಿಯೇ ನಿಃಸಂಗತ್ವದ ಸ್ಥಿತಿ. ಈ ಸ್ಥಿತಿಯನ್ನು ಸತ್ಸಂಗದ ಮೂಲಕ ತಲುಪಬೇಕು — ನದಿಯ ಮೂಲಕವೇ ನದಿಯಾಚೆಯನ್ನು ತಲುಪುವಂತೆ. ಕೇವಲ ಕರ್ಮತ್ಯಾಗದಿಂದ ನೈಷ್ಕರ್ಮ್ಯಸ್ಥಿತಿ ಉಂಟಾಗುವುದಿಲ್ಲ; ಅನಾಸಕ್ತಿ ಭಾವದಿಂದ ಕರ್ಮ ಮಾಡುತ್ತ ಹೋದರೆ ನೈಷ್ಕರ್ಮ್ಯಸ್ಥಿತಿ ಉಂಟಾಗುತ್ತದೆ, ಎಂಬುದು ಗೀತೆಯ ಅಭಿಪ್ರಾಯ. ಅದೇ ರೀತಿ ಕೇವಲ ಸಂಗತ್ಯಾಗದಿಂದ ನಿಸ್ಸಂಗತ್ವ ಉಂಟಾಗುವುದಿಲ್ಲ. ಕೇವಲ ನಿರ್ಜನ ಪ್ರದೇಶದಲ್ಲಿ ವಾಸಿಸುತ್ತಿದ್ದರೆ ನಿಸ್ಸಂಗವಾಗುವುದಿಲ್ಲ. ನಿರ್ಜನವಾಸಿಯು ಮನಸ್ಸಿನಲ್ಲಿಯೇ ಅನೇಕರ ಸಂಗವನ್ನು - ದುಸ್ಸಂಗವನ್ನು ಕೂಡ - ಮಾಡುತ್ತಿರಬಹುದು. ಆದರೆ ಜನರೊಡನೆ ವಾಸಿಸುವ ವ್ಯಕ್ತಿಯು ನಿಜವಾಗಿಯೂ ನಿಸ್ಸಂಗಿಯಾಗಿರಲು ಸಾಧ್ಯ — ಎಲ್ಲರೊಡನೆ ಬೆರೆತೂ ನಿಸ್ಸಂಗಿಯಾಗಿರಲು ಸಾಧ್ಯ. ಆದ್ದರಿಂದ ನಿಸ್ಸಂಗವೆಂದರೆ ಕೇವಲ ವಿಷಯಾಸಕ್ತಿ ಇಲ್ಲದಿರುವುದು ಎಂದಷ್ಟೇ ಅಲ್ಲ. ಭಾವನಾತ್ಮಕವಾಗಿಯೂ ಯಾರ ಸಂಗವನ್ನೂ ಬಯಸದೆ, ಅಂದರೆ ಯಾರ ಪ್ರೀತಿ, ಸಹಾನುಭೂತಿ, ಸಾಂತ್ವನ, ಮಾನ್ಯತೆ, ಪ್ರಶಂಸೆ ಇತ್ಯಾದಿಗಳನ್ನು ಬಯಸದೆ, ಯಾರ ಗಮನವನ್ನೂ ಸೆಳೆಯುವ ಪ್ರಯತ್ನವಿಲ್ಲದೆ ಇರುವ ಸ್ವತಂತ್ರ ಮನೋವೃತ್ತಿ. ಇದೇ ನಿಜವಾದ ನಿಸ್ಸಂಗ.

ಶ್ರೀರಾಮಕೃಷ್ಣರು ಸತ್ಸಂಗಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. ಸತ್ಸಂಗವೆಂದರೇನು ಎಂಬುದನ್ನು ವಿಚಾರ ಮಾಡೋಣ. ಎಲ್ಲರೂ ಸಂಗವನ್ನು ಬಯಸುತ್ತಾರೆ. ಬ್ರಹ್ಮನಿಗೂ ಒಂಟಿಯಾಗಿರಲಾಗದೆ ಜಗತ್ತನ್ನು ಸೃಷ್ಟಿಸಿದನೆಂದು ಶಾಸ್ತ್ರ ಹೇಳುತ್ತದೆ. ಒಂದು ಹಡಗು ಅಪಘಾತಕ್ಕೆ ಒಳಗಾಗಿ ಮುಳುಗಿಹೋಯಿತು. ಅದರಲ್ಲಿದ್ದ ಮೂವರು ಸ್ನೇಹಿತರು ಈಜಿಕೊಂಡು ಹತ್ತಿರದ ಒಂದು ದ್ವೀಪವನ್ನು ಸೇರಿದರು. ಅದು ಸಂಪೂರ್ಣ ನಿರ್ಜನಪ್ರದೇಶ, ಯಾವುದೇ ಪ್ರಾಣಿಗಳ ಸುಳಿವೂ ಇರಲಿಲ್ಲ. ಆ ಮೂವರಲ್ಲಿ ಇಬ್ಬರಿಗೆ ತುಂಬ ತಳಮಳವುಂಟಾಯಿತು. ಇಂತಹ ನಿರ್ಜನಪ್ರದೇಶದಲ್ಲಿ ಹೇಗೆ ಕಾಲ ಕಳೆಯುವುದು ಎಂದು ಆತಂಕಕ್ಕೊಳಗಾದರು. ಆದರೆ ಮೂರನೆಯವನು ಏಕಾಂತಪ್ರಿಯ, ಈ ನಿರ್ಜನಪ್ರದೇಶವನ್ನು ನೋಡಿ ಸಂತೋಷದಿಂದ ಕುಣಿದಾಡಿದನು. ತಾನು ಇಲ್ಲೇ ಇದ್ದುಬಿಡುತ್ತೇನೆ ಎಂದು ಅವನು ಭಾವಿಸಿದನು. ಹೀಗೆ ಮೂವರು ಅಲ್ಲಿ ಓಡಾಡುತ್ತಿರುವಾಗ ದೂರದಲ್ಲಿ ಒಂದು ಬಾಟ್ಲಿ ಕಾಣಿಸಿತು. ಅದನ್ನು ನೋಡಿದಾಗ ಅದು ಜನವಸತಿಯ ಸೂಚಕವಿರಬಹು



ದೆನಿಸಿತು. ಆ ಬಾಟ್ಲಿಯನ್ನು ಕೈಗೆತ್ತಿಕೊಂಡು ಅದರ ಮುಚ್ಚಳವನ್ನು ತೆಗೆದರು. ಕೂಡಲೆ 'ಬುಸ್' ಎಂದು ಬಾಟ್ಲಿಯಿಂದ ಒಂದು ಅನಿಲ ಹೊರಹೊಮ್ಮಿತು.

ಅದು ಒಂದು ಭಯಂಕರ ಭೂತಾಕಾರವನ್ನು ಪಡೆಯಿತು. ಈ ಮೂವರು ಭಯಾಶ್ಚರ್ಯಗಳಿಂದ ನೋಡುತ್ತಿರಲು ಆ ಭೂತ ಹೇಳತೊಡಗಿತು: ''ಭಯಪಡಬೇಡಿ. ನನ್ನನ್ನು ಯಾರೋ ಈ ಬಾಟ್ಲಿಯಲ್ಲಿ ಬಂಧಿಸಿಟ್ಟಿದ್ದರು. ನೀವು ನನಗೆ ಬಿಡುಗಡೆಯನ್ನು ಕೊಟ್ಟಿರಿ. ನೀವು ಮಾಡಿದ ಉಪಕಾರಕ್ಕೆ ನಾನು ಪ್ರತ್ಯುಪಕಾರ ಮಾಡಬೇಕು(ನಾನು ಮನುಷ್ಯರಂತಲ್ಲದೆ ಇರುವುದರಿಂದ). ನಿಮಗೇನು ವರಬೇಕು ಕೇಳಿ.'' ಮೊದಲನೆಯವನು ಹೇಳಿದ: ''ನಾನು ಈ ದ್ವೀಪದಲ್ಲಿ ಇರಲಾರೆ. ಕೂಡಲೆ ನನ್ನನ್ನು ಮೈಸೂರಿಗೆ ಬಿಟ್ಟುಬಿಡು.'' ಭೂತ ಒಂದೇ ಕ್ಷಣದಲ್ಲಿ ಅವನನ್ನು ಮೈಸೂರಿಗೆ ಕರೆದುಕೊಂಡುಹೋಗಿ ಬಿಟ್ಟಿತು. ಎರಡನೆಯವನು ತಾನು ಬೆಂಗಳೂರಿನವನೆಂದು ಅಲ್ಲಿಗೆ ಹೊರಟುಹೋದನು. ತಾನು ಏಕಾಂತ ಪ್ರಿಯ, ಇಲ್ಲಿಯೇ ಇದ್ದುಬಿಡುತ್ತೇನೆ ಎಂದು ಕೊಚ್ಚಿಕೊಳ್ಳುತ್ತಿದ್ದ ಮೂರನೆಯವನಿಗೆ ತಾನೊಬ್ಬನೇ ಇಲ್ಲಿರುವುದು ಅಸಾಧ್ಯವೆಂದು ಈಗ ಅನಿಸತೊಡಗಿತು. ಅವನು ಭೂತವನ್ನು, ''ಆ ಇಬ್ಬರನ್ನೂ ಪುನಃ ಹಿಂತಿರುಗಿ ಕರೆದುಕೊಂಡು ಬಾ'' ಎಂದು ಕೇಳಿಕೊಂಡನು. ಸಂಪೂರ್ಣ ನಿರ್ಜನಪ್ರದೇಶದಲ್ಲಿರುವಾಗಲೇ ನಮಗೆ ತಿಳಿದು ಬರುತ್ತದೆ, ನಾವೆಷ್ಟು ಸಂಗವನ್ನು ಬಯಸುತ್ತೇವೆ ಎಂದು.

ನಾವು ಮೂರು ರೀತಿಯ ಸತ್ಸಂಗವನ್ನು ಗುರುತಿಸಬಹುದು – ಸತ್ಯವಸ್ತುವಿನ ಸಂಗ, ಸಜ್ಜನರ ಸಂಗ ಮತ್ತು ಸದ್ಭಾವನೆಗಳ ಸಂಗ.

**೧) ಸದ್ವಸ್ತುವಿನ ಸಂಗ :** ಸದ್ವಸ್ತು ಯಾವುದೆಂದರೆ ಭಗವಂತ. ಆದ್ದರಿಂದ ಭಗವತ್ಸಾನ್ನಿಧ್ಯದಲ್ಲಿರುವುದೇ ಸದ್ವಸ್ತುವಿನ ಸಂಗ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸ್ವಾಮಿ ಯತೀಶ್ವರಾನಂದರ ವಾಣಿಯನ್ನು ಆಲಿಸೋಣ: ''ಆಧ್ಯಾತ್ಮಿಕ ಜೀವನದಲ್ಲಿ ಏನಾದರೂ ಸಾಧಿಸಬೇಕಿದ್ದರೆ, ಬೆಳಗ್ಗೆ ಮತ್ತು ಸಂಜೆ ಒಂದೆರಡು ಗಂಟೆ ಧ್ಯಾನ ಮಾಡಿದರೆ ಸಾಲದು. ಈ ಧ್ಯಾನ ಭಾವವನ್ನು ದಿನವಿಡೀ ಉಳಿಸಿಕೊಳ್ಳಬೇಕು. ಜೀವನದ ದೈನಂದಿನ ಕರ್ತವ್ಯಗಳನ್ನು ನಿರ್ವಹಿಸುವಾಗಲೂ ಆಧ್ಯಾತ್ಮಿಕ ಅಂತಃಸ್ರೋತ ಹರಿಯುತ್ತಿರಬೇಕು. ಅಶುದ್ಧ ಭಾವನೆ ಏಳುವುದನ್ನು ಅದು ತಡೆಯುತ್ತದೆ. ಅಲ್ಲದೆ ನಾವು ಧ್ಯಾನಕ್ಕೆ ಕುಳಿತಾಗ ಬೇಗ ಮನಸ್ಸು ಏಕಾಗ್ರಗೊಳ್ಳಲು ಸಹಾಯಕ ವಾಗುತ್ತದೆ. ನಿತ್ಯ ಧ್ಯಾನದೊಂದಿಗೆ ಭಗವತ್ಸನ್ನಿಧಿಯ ಚಿಂತನೆ ನಡೆಯುತ್ತಿರಬೇಕು. ಇದನ್ನೇ ಸರಿಯಾಗಿ ಮಾಡಿದರೆ ಅದೇ ಒಂದು ತೀವ್ರ ಆಧ್ಯಾತ್ಮಿಕ ಸಾಧನೆಯಾಗುತ್ತದೆ.'' *(ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಪು. ೩೬೯)* ಅವರು ಮುಂದುವರಿದು ಹೇಳುತ್ತಾರೆ: ''ನಾವು ಭಗವಂತನನ್ನು ಯಾವಾಗಲೂ ಸ್ಮರಿಸುತ್ತಿರಬೇಕು. ಇದನ್ನು ಮಾಡುವ ಒಂದೇ ಒಂದು ವಿಧಾನವೆಂದರೆ ನಾವು ಮಾಡುವ, ಯೋಚಿಸುವ ಎಲ್ಲವನ್ನೂ ಭಗವಂತನಿಗೆ ಸಂಬಂಧಿಸುವುದು.'' *(ಅದೇ.)*

ಸ್ವಾಮಿ ಯತೀಶ್ವರಾನಂದರು ಹೇಳುವಂತೆ, ನಾವು ಎಷ್ಟು ಆಧ್ಯಾತ್ಮಿಕರು ಎಂಬುದನ್ನು ನಿರ್ಣಯಿಸಲು ದಿನದ ವೇಳೆ ಎಷ್ಟು ಬಾರಿ ಭಗವದ್ವಿಷಯ ಮನಸ್ಸಿಗೆ ಬರುತ್ತದೆ, ಮತ್ತು ಅದು ಯಾವ ರೀತಿಯದಾಗಿರುತ್ತದೆ ಎಂಬುದನ್ನು ನೋಡಬೇಕು. ದಿನದಲ್ಲಿ ಒಂದೆರಡು ಬಾರಿ ಧ್ಯಾನಕ್ಕೆ ಕುಳಿತುಕೊಂಡರೆ ಸಾಲದು, ಕೆಲಸದ ವೇಳೆಯಲ್ಲಿಯೂ ಭಗವದ್ಭಾವನೆ ಪುಟಿಯುತ್ತಿರಬೇಕು, ಇದೇ ನಿಜವಾದ ಆಧ್ಯಾತ್ಮಿಕ ಜೀವನ ಎಂದು ಅವರು ಹೇಳುತ್ತಾರೆ.

ರಮಣ ಮಹರ್ಷಿಗಳ ಜೀವನಕ್ಕೆ ಸಂಬಂಧಿಸಿದ ಕಥೆ ತುಂಬ ಸ್ವಾರಸ್ಯಕರವಾಗಿದೆ. ಒಬ್ಬ ಯುವಕನು ಬಂದು ಧ್ಯಾನ ಮಾಡುವುದು ಹೇಗೆ ಎಂದು ರಮಣಮಹರ್ಷಿಗಳನ್ನು ಕೇಳಿದನು. ಅದೇ ಸಂದರ್ಭದಲ್ಲಿಯೇ ಒಬ್ಬ ಭಕ್ತನು ಅನೇಕ ಮಸಾಲೆ ದೋಸೆಗಳನ್ನು ತಂದು ಅವರಿಗೆ ಅರ್ಪಿಸಿದನು. ಅವರು ಅವನ್ನು ನೆರೆದಿರುವ ಭಕ್ತರಿಗೆ ಹಂಚಬೇಕೆಂದು ತಿಳಿಸಿದರು. ಆ ಯುವಕನಿಗೂ ಒಂದು ದೋಸೆಯನ್ನು ಕೊಡಲಾಯಿತು. ಅವನು ಅದನ್ನು ತಿನ್ನುವುದಕ್ಕೆ ರಮಣರು ಒಂದು ಶರತ್ತನ್ನು ಒಡ್ಡಿದರು. ಅದೇನೆಂದರೆ, ಅವನು ದೋಸೆಯನ್ನು ತಿನ್ನುತ್ತಿರಬೇಕು, ಮತ್ತು ಅವರು 'ಹೂಂ' ಎಂದಾಕ್ಷಣ ಅವನು ತಿನ್ನುವುದನ್ನು ನಿಲ್ಲಿಸಿಬಿಡಬೇಕು. ಆದರೆ ಅಷ್ಟು ಹೊತ್ತಿಗೆ ದೋಸೆ ತಿನ್ನುವುದು ಮುಗಿದಿರಬೇಕು. ಅವನು ಒಪ್ಪಿ ದೋಸೆ ತಿನ್ನಲು ಪ್ರಾರಂಭಿಸಿದ. ಅವರು 'ಹೂಂ' ಎಂದಾಕ್ಷಣ ಕೊನೆಯ ಒಂದು ಚೂರು ದೋಸೆಯನ್ನು ಬಾಯಿಗೆ ಹಾಕಿ ಮುಗಿಸಿಬಿಟ್ಟ. ರಮಣ ಮಹರ್ಷಿಗಳು ಭೇಷ್ ಎಂದು ಪ್ರಶಂಸಿಸಿ ಕೇಳಿದರು, ''ದೋಸೆ ಹೇಗಿತ್ತು?'' ಎಂದು. ಅವನು ಹೇಳಿದ: ''ನನ್ನ ಗಮನವೆಲ್ಲ ನಿಮ್ಮ ತುಟಿಯ ಕಡೆಗೇ ಇತ್ತು. ಯಾವಾಗ 'ಹೂಂ' ಎನ್ನಲು ನಿಮ್ಮ ತುಟಿಯಲ್ಲಿ ಚಲನೆಯುಂಟಾಗುವುದೊ ಅದರ ಕಡೆಗೇ ಗಮನ. ದೋಸೆಯ ಕಡೆಗಾಗಲಿ, ಅದರ ರುಚಿಯ ಕಡೆಗಾಗಲಿ ಗಮನವೇ ಇರಲಿಲ್ಲ.'' ಆಗ ರಮಣರು ಮುಗುಳ್ನಗುತ್ತ ಹೇಳಿದರು: ''ಧ್ಯಾನವೆಂದರೆ ಇದೇಯಪ್ಪ. ಎಲ್ಲ ಕೆಲಸಗಳನ್ನು ಮಾಡುತ್ತಿರು. ಆದರೆ ನಿನ್ನ ಗಮನವೆಲ್ಲ ಭಗವಂತನ ಕಡೆಗಿರಲಿ.''

**ಸಜ್ಜನರ ಸಂಗ:** ಶ್ರೀರಾಮಕೃಷ್ಣರು ಹೇಳುವಂತೆ ಸಾಧುಸಂಗದಿಂದ ಭಗವದ್ವ್ಯಾಕುಲತೆ ಮತ್ತು ವೈರಾಗ್ಯಗಳು ಉಂಟಾಗುತ್ತವೆ. ''ಹಾಗಾದರೆ ದಾರಿಯೇನು?'' ಎಂಬ ಪ್ರಶ್ನೆಗೆ ಅವರು ಉತ್ತರಿಸುತ್ತಾರೆ: ''ಪ್ರಾರ್ಥನೆ ಮತ್ತು ಸಾಧುಸಂಗ. ನಿಮಗೆ ಖಾಯಿಲೆಯಾದರೆ ವೈದ್ಯನ ಸಹಾಯ ಬೇಕೇಬೇಕು. ಯಾವಾಗಲೋ ಒಂದು ದಿನ ಸಾಧುಸಂಗ ಮಾಡಿದರೆ ಸಾಲದು. ನೀವು ಯಾವಾಗಲೂ ಅದನ್ನು ಅರಸಬೇಕು. ಏಕೆಂದರೆ ರೋಗ ದೀರ್ಘಕಾಲದಿಂದ ಇದೆ. ಮತ್ತೆ ವೈದ್ಯನೊಡನೆ ನೀವು ವಾಸಿಸದಿದ್ದರೆ ನಾಡಿ ನೋಡುವುದು ಹೇಗೆಂಬುದು ತಿಳಿಯುವುದಿಲ್ಲ. ಅವನೊಡನೆ ಬಹಳ ಕಾಲ ಓಡಾಡುತ್ತಿದ್ದರೆ ಆಗ ತಿಳಿಯುತ್ತದೆ, ಯಾವುದು ಕಫದ ನಾಡಿ, ಯಾವುದು ಪಿತ್ತದ ನಾಡಿ ಎಂದು.'' ಭಕ್ತನು, ''ಸಾಧುಸಂಗದಿಂದ ಏನು ಲಾಭ?'' ಎಂದು ಕೇಳಿದಾಗ ಶ್ರೀರಾಮ

ಕೃಷ್ಣರು ಹೇಳುತ್ತಾರೆ: ''ಅದು ಭಗವದ್ ವ್ಯಾಕುಲತೆಯನ್ನು ಉಂಟುಮಾಡುವುದು. ಅದು ಭಗವತ್ ಪ್ರೇಮವನ್ನು ಹುಟ್ಟಿಸುವುದು. ವ್ಯಾಕುಲತೆ ಇಲ್ಲದೆ ಆಧ್ಯಾತ್ಮಿಕ ಜೀವನದಲ್ಲಿ ಏನನ್ನೂ ಸಾಧಿಸಲಾಗುವುದಿಲ್ಲ. ನಿರಂತರವಾಗಿ ಸಾಧುಸಂಗದಲ್ಲಿರುವುದರಿಂದ ಜೀವ ಭಗವಂತನಿಗಾಗಿ ತವಕಿಸುವುದು... ಸಾಧುಸಂಗದಿಂದ ಇನ್ನೊಂದು ಪ್ರಯೋಜನವಿದೆ. ಸತ್ಯಾಸತ್ಯ ವಿವೇಚನೆಯನ್ನು ಬೆಳೆಸಿಕೊಳ್ಳಲು ಅದು ಸಹಾಯಕವಾಗುವುದು. ದೇವರು ಮಾತ್ರ ಸತ್ಯ ; ಅವನೇ ಶಾಶ್ವತ ವಸ್ತು ಮತ್ತು ಪ್ರಪಂಚ ಅವಸ್ತು, ಕ್ಷಣಿಕ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ'ದಲ್ಲಿ ಉದ್ಧೃತ, ಪು. ೧೨೧)* ಸಹ ಪ್ರಯಾಣಿಕರು ಪರಸ್ಪರ ಸಹಕರಿಸುವಂತೆ ಸತ್ಪುರುಷರೊಡನೆ ಬೆರೆಯುವುದರಿಂದ, ಮಾತನಾಡುವುದರಿಂದ ಆಧ್ಯಾತ್ಮಿಕ ಜೀವನಕ್ಕೆ ಹೆಚ್ಚು ಪ್ರೇರಣೆ ದೊರೆಯುತ್ತದೆ. ದಿನನಿತ್ಯ ವ್ಯಾವಹಾರಿಕ ಜೀವನದಲ್ಲಿ ತೊಡಗಿರುವುದರಿಂದ ಮನಸ್ಸು ಆಧ್ಯಾತ್ಮಿಕ ಆದರ್ಶದಿಂದ ದೂರವಾಗುವ ಸಂದರ್ಭವಿರುತ್ತದೆ. ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿರುವ ಸಜ್ಜನರ ಸಂಗದಿಂದ ಮನಸ್ಸು ಭಗವನ್ಮುಖವಾಗುತ್ತದೆ. ನಿಜವಾದ ಆಧ್ಯಾತ್ಮಿಕ ಸಾಧಕರ ಒಂದು ಮುಖ್ಯ ಲಕ್ಷಣವೇನೆಂದರೆ ಅವರು ಯಾವಾಗಲೂ ಸಜ್ಜನರ ಸಂಗವನ್ನು ಬಯಸುತ್ತಾರೆ. ನಾವು ಎಂಥವರ ಸಹವಾಸವನ್ನು ಬಯಸುತ್ತೇವೆ ಎಂಬುದನ್ನಾಧರಿಸಿ ನಾವೆಂಥವರು ಎಂಬುದನ್ನು ನಿರ್ಧರಿಸಬಹುದು.

ಕೆಲವು ಸಂದರ್ಭಗಳಲ್ಲಿ ಕಾರ್ಯನಿಮಿತ್ತವಾಗಿ ಪ್ರಾಪಂಚಿಕ ವ್ಯಕ್ತಿಗಳೊಡನೆ ಬೆರೆಯಬೇಕಾಗಬಹುದು. ನಾವು ಎಚ್ಚರಿಕೆಯಿಂದಿರದಿದ್ದರೆ ಕ್ರಮೇಣ ಅವರೊಡನೆ ನಿಕಟ ಸಂಬಂಧವುಂಟಾಗಿ ನಮಗೇ ತಿಳಿಯದಂತೆ ಕ್ರಮೇಣ ಅವರ ಸ್ವಭಾವ ನಮ್ಮನ್ನೂ ಪ್ರವೇಶಿಸಿ ಬಿಡುತ್ತದೆ. ಆದ್ದರಿಂದಲೇ ''**ದುಃಸಂಗಃ ಸರ್ವಥೈವ ತ್ಯಾಜ್ಯಃ**'' ಎಂದು ಹೇಳಿರುವುದು. ದುಷ್ಟರನ್ನು ನಿರಂತರವಾಗಿ ಖಂಡಿಸುವುದರ ಮೂಲಕವೂ ದುಃಸಂಗವನ್ನು ಮಾಡಿದಂತಾಗುತ್ತದೆ. ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ: ''ಸಾಧಕನು ಯಾರೆಂದವ ರೊಡನೆ ಬೆರೆಯಬಾರದು ನಿಜ, ಆದರೆ ಯಾರನ್ನೂ ಖಂಡಿಸುವುದು ಸರಿಯಲ್ಲ. ಅಶುದ್ಧರನ್ನು ಖಂಡಿಸುತ್ತ ತನ್ನ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳಬೇಕಾಗಿಲ್ಲ. 'ನಾನು ನಿಮಗಿಂತ ಪವಿತ್ರ' ಎಂಬ ಭಾವನೆ ತೀರ ಕೆಟ್ಟದ್ದು. ಇದರಿಂದ ಒಂದು ರೀತಿಯ ಮೊಂಡು ಧೈರ್ಯ ಬಂದು ಅಜಾಗರೂಕರಾಗುತ್ತೇವೆ... ನಾವು ಕೆಟ್ಟವರ ಸಂಗದಲ್ಲಿ ಇರಬೇಕಾದ ಪರಿಸ್ಥಿತಿ ಬಂದಾಗ ಏನು ಮಾಡುವುದು? ತಿರಸ್ಕಾರವನ್ನೂ ತೋರಿಸಬೇಡಿ ಅಥವಾ ಉದಾಸೀನರೂ ಆಗಬೇಡಿ. ತುಂಬ ಎಚ್ಚರಿಕೆಯಿಂದಿದ್ದು ಬಲವಾದ ಮಾನಸಿಕ ತಡೆಯನ್ನು ನಿರ್ಮಿಸಿ. ಆಂತರಿಕ ಕವಚದ ಮೂಲಕ ನಿಮ್ಮನ್ನು ರಕ್ಷಿಸಿಕೊಳ್ಳಿ. ಬಿಚ್ಚು ಮನಸ್ಸಿನಿಂದ ಆತ್ಮವಿಶ್ಲೇಷಣೆ ಮಾಡಿ. ಕೆಟ್ಟ ಸಂಸ್ಕಾರ ಬಲವಾಗಿ ಬೇರುಬಿಡುವುದಕ್ಕೆ ಮುಂಚೆ ಅದನ್ನು ದೂರವಿರಿಸಿ. ನೈಜ ಆಧಾತ್ಮಿಕ ಸಾಧಕನು ಯಾವಾಗಲೂ ವಿಚಾರ ಮಾಡುತ್ತಾನೆ. ಅದೊಂದು ಅಭ್ಯಾಸವಾಗುತ್ತದೆ ಅವನಿಗೆ. ನೀವು ಯಾವಾಗಲೂ ದೇವರೆಡೆಗೆ ಓಡುವ ಭಾವದಲ್ಲಿ ಇರಬೇಕು. ಕಾಂಗರೂ ಮರಿಯಂತಿರಿ. ಅದಕ್ಕೆ ಸ್ವಲ್ಪ ಅಪಾಯ ಸುಳಿದರೆ ಸಾಕು ಕೂಡಲೇ ತಾಯಿಯ ಮಡಿಲಿಗೆ ನೆಗೆಯುತ್ತದೆ. ಹಾಗೆಯೇ ನಾವು ಅಪಾಯ ಕಂಡಕೂಡಲೇ ದೇವರನ್ನು ಆಶ್ರಯಿಸಬೇಕು.'' *(ಅದೇ, ಪು. ೧೨೫)*

''ಸ್ವರ್ಗದಲ್ಲಿ ಮೂರ್ಖರೊಡನೆ ಇರುವುದಕ್ಕಿಂತ ಕಾಡು ಮೇಡುಗಳಲ್ಲಿ ಪ್ರಾಣಿಗಳೊಡನೆ ಇರುವುದು ಲೇಸು'' ಎಂದು ಒಂದು ಸಂಸ್ಕೃತ ಶ್ಲೋಕ ಹೇಳುತ್ತದೆ. ಒಬ್ಬ ಯುವ ಸಾಹಸಿ ಇದ್ದ. ಅವನು ಒಂದು ದಿನ ಕಾಡಿನಲ್ಲಿ ಹೋಗುತ್ತಿರುವಾಗ ಅವನ ಸಾಹಸವನ್ನು ಮೆರೆಯುವುದಕ್ಕೆ ಒಂದು ಅವಕಾಶ ದೊರೆಯಿತು. ಒಂದು ಕರಡಿ ಹೆಬ್ಬಾವಿನ ಬಾಯಿಗೆ ಸಿಕ್ಕಿಹಾಕಿಕೊಂಡಿದ್ದು ಹೊರಬರಲು ಹೆಣಗಾಡುತ್ತಿತ್ತು. ಈ ಸಾಹಸಪ್ರಿಯನು ಕೂಡಲೇ ಕಾರ್ಯೋನ್ಮುಖನಾದ. ತನ್ನ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ಕರಡಿಯನ್ನು ಎಳೆದು ಹೆಬ್ಬಾವಿನ ಮೃತ್ಯುಮುಖದಿಂದ ತಪ್ಪಿಸಿದ. ಈಗ ಕರಡಿಗೆ ಇವನ ಮೇಲೆ ಅಪಾರ ಕೃತಜ್ಞತೆಯುಂಟಾಗಿ ಇವನನ್ನೇ ಹಿಂಬಾಲಿಸತೊಡಗಿತು. ಅವನ ದಾಸಾನುದಾಸನಂತೆ ಅವನ ಸೇವಾತತ್ಪರವಾಯಿತು. ಅವನೂ ಅದರ ನಿಷ್ಠೆಯನ್ನು ಕಂಡು ಅದನ್ನು ತನ್ನ ಸಂಗಾತಿಯನ್ನಾಗಿ ಮಾಡಿಕೊಂಡ. ಅದನ್ನು ಪ್ರೀತಿಯಿಂದ ಜಾಂಬವಂತ ಎಂದು ಕರೆಯುತ್ತಿದ್ದ. ಹಿರಿಯರೊಬ್ಬರು ಈ ಯುವಕನು ಕರಡಿಯ ಸಹವಾಸದಲ್ಲಿರುವುದನ್ನು ಕಂಡು ಅವನಿಗೆ ಎಚ್ಚರಿಕೆ ನೀಡಿದರು: ''ನೋಡಪ್ಪ, ಈ ರೀತಿ ಪ್ರಾಣಿಗಳ ಸಹವಾಸ ಒಳ್ಳೆಯದಲ್ಲ. ಅವಕ್ಕೆ ಎಷ್ಟಾದರೂ ತಿಳಿವಳಿಕೆ ಇರುವುದಿಲ್ಲ. ಯಾವ ಸಂದರ್ಭದಲ್ಲಿ ಏನಾಗಬಹುದೆಂದು ಹೇಳಲಾಗುವುದಿಲ್ಲ. ಅದರಿಂದ ದೂರವಿರು.'' ಯುವಕನಿಗೆ ಹಿರಿಯರ ಈ ಕಿವಿಮಾತು ಕಿವಿಯೊಳಗೆ ಹೋಗಲೇ ಇಲ್ಲ. ಒಂದು ದಿನ ಮಧ್ಯಾಹ್ನ ಊಟದ ನಂತರ ದಣಿದು ನಿದ್ರಿಸುತ್ತಿದ್ದ. ಕರಡಿ ಅವನನ್ನು ಕಾಯುತ್ತ ಕುಳಿತಿತ್ತು. ಕೆಲವು ನೊಣ ಅವನ ಮೈಮೇಲೆ ಅಡ್ಡಾಡತೊಡಗಿದವು. ಕರಡಿ ಅವನ್ನು ಎಷ್ಟೇ ಓಡಿಸಿದರೂ ಮತ್ತೆ ಅವು ಅವನ ಮೈರುಚಿಯನ್ನು ಸವಿಯಲು ಬರುತ್ತಿದ್ದವು. ಈಗ ಕರಡಿಗೆ ತಾಳ್ಮೆ ಮೀರಿತು. ಈ ನೊಣಗಳನ್ನು ಮೃತ್ಯುವಿಗೆ ಬಲಿಕೊಡಬೇಕು ಎಂದು ನಿರ್ಧರಿಸಿ ಒಂದು ದೊಡ್ಡ ಕಲ್ಲನ್ನು ತಂದು ಅವನ ಮೇಲೆ ಕುಳಿತಿದ್ದ ನೊಣಗಳ ಮೇಲೆ ಜೋರಾಗಿ ಅಪ್ಪಳಿಸಿತು. ನೊಣಗಳೇನೊ ತಪ್ಪಿಸಿಕೊಂಡವು, ಮೃತ್ಯುವಿಗೆ ಬಲಿಯಾದವನು ಯುವಕ. *(ಜಲಾಲುದ್ದೀನ್ ರೂಮಿ ಹೇಳಿದ ಕಥೆ)*

**ಸದ್ಭಾವನೆಗಳ ಸಂಗ:** ಇದು ತುಂಬ ಮುಖ್ಯವಾದದು. ನಮ್ಮ ಅಂತರಂಗದಲ್ಲಿ ಸದ್ಭಾವನೆಗಳನ್ನು ಭಾವಿಸುತ್ತಿರುವುದು ಅತಿ ಮುಖ್ಯವಾದ ಸತ್ಸಂಗ. ನಿಜವಾಗಿಯೂ ನಮ್ಮ ಅಂತರಂಗದ ಸಂಗವೇ ಬಹಿರಂಗದ ಸಂಗವನ್ನು ನಿರ್ಧರಿಸುವುದು. ಸಜ್ಜನರ ಸದ್ಗುಣಗಳನ್ನು ಮೆಲುಕು ಹಾಕುವುದರ ಮೂಲಕ ಸತ್ಸಂಗವನ್ನೇ

ಮಾಡಿದಂತಾಗುತ್ತದೆ. ಹಾಗೆಯೇ ದುರ್ಜನರ ದುರ್ಗುಣಗಳನ್ನು ಚಿಂತಿಸುವುದರ ಮತ್ತು ಇತರರೊಡನೆ ಚರ್ಚಿಸುವುದರ ಮೂಲಕವೂ ದುಃಸಂಗವನ್ನೇ ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದಲೇ ಶ್ರೀಮಾತೆ ಶಾರದಾದೇವಿಯವರು ಇತರರ ದೋಷವನ್ನು ನೋಡಬಾರದೆಂದು ಉಪದೇಶಿಸಿರುವುದು. ಸಜ್ಜನರಲ್ಲಿಯೂ ಕೆದಕಿ ಕೆದಕಿ ದುರ್ಗುಣಗಳನ್ನು ಕಂಡುಹಿಡಿಯುವ ಅಪೂರ್ವ ಸಾಮರ್ಥ್ಯವುಳ್ಳ ಕೆಲವರು ಇರುತ್ತಾರೆ. ಅವರು ಆಧ್ಯಾತ್ಮಿಕ ಸಾಧಕರಾಗಿದ್ದರೂ ಈ ಸ್ವಭಾವವೇ ಅವರ ಆಧ್ಯಾತ್ಮಿಕ ಪ್ರಗತಿಗೆ ತಡೆಯಾಗುತ್ತದೆ. ಇನ್ನು ಕೆಲವು ಒಳ್ಳೆಯ ವ್ಯಕ್ತಿಗಳು ದುಷ್ಟರನ್ನು ದೂಷಿಸುತ್ತ ತಮ್ಮ ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ಆದರೆ ದುಷ್ಟರು ತಮ್ಮ ದುಷ್ಟತನವನ್ನೇ ಮರೆಯುತ್ತ ಬಹುಶಃ ನೆಮ್ಮದಿಯಿಂದಿರುತ್ತಾರೆ.

ನಾವು ನಿಷೇಧಾತ್ಮಕ ಭಾವನೆಗಳನ್ನು ತೀವ್ರವಾಗಿ ಚಿಂತಿಸಿದರೆ ಅವು ನಮ್ಮ ಸುತ್ತ ನಿಷೇಧಾತ್ಮಕ ಸ್ಪಂದನಗಳನ್ನು ಸೃಷ್ಟಿಸುತ್ತವೆ. ಅನೇಕರ ದುಶ್ಚಿಂತನೆಗಳಿಂದ ಹೊರಗಿನ ವಾತಾವರಣದಲ್ಲಿಯೂ ನಿಷೇಧಾತ್ಮಕ ಸ್ಪಂದನಗಳೇ ಅಧಿಕವಾಗಿ ಕೆಲವು ದುಷ್ಟವ್ಯಕ್ತಿಗಳಿಗೆ ದುಷ್ಕೃತ್ಯವೆಸಗಲು ಪ್ರೇರಣೆ ನೀಡುತ್ತವೆ. ಇದರಿಂದಾಗಿಯೇ ಹಿಂಸಾಚಾರ, ಅತ್ಯಾಚಾರ, ದೌರ್ಜನ್ಯಗಳು ಸಮಾಜದಲ್ಲಿ ಜರಗುತ್ತವೆ. ಇದೇ ಸಚ್ಚಿಂತನೆಗಳಿಗೂ ಅನ್ವಯಿಸುತ್ತದೆ. ಸಚ್ಚಿಂತನೆಗಳ ಮೂಲಕ ಸಮಾಜದಲ್ಲಿ ಸತ್‌ಸ್ಪಂದನಗಳನ್ನು ಅಧಿಕಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ದೂರದಲ್ಲೆಲ್ಲೋ ಒಂದು ಅತ್ಯಂತ ಅಹಿತಕರ ಘಟನೆ ಸಂಭವಿಸಿದರೆ ನಾವು ಅದಕ್ಕೆ ಜವಾಬ್ದಾರರಲ್ಲ ಎಂದು ಭಾವಿಸಬಾರದು, ಪರೋಕ್ಷವಾಗಿ ನಮ್ಮ ಜವಾಬ್ದಾರಿಯ ಪಾಲೂ ಅದರಲ್ಲಿರುತ್ತದೆ ಎಂದು ಲೇಖಕರೊಬ್ಬರು ಅಭಿಪ್ರಾಯಪಡುತ್ತಾರೆ. ಏಕೆಂದರೆ ವಿಶ್ವಸ್ಪಂದನದ ತೀವ್ರತೆಯನ್ನು (global vibrational frequency) ಅದು ಒಳಿತಾಗಿರಲಿ ಕೆಡುಕಾಗಿರಲಿ — ಅದನ್ನು ಅಧಿಕಗೊಳಿಸುವ ಅಥವಾ ಕಡಿಮೆಗೊಳಿಸುವ ಪ್ರಕ್ರಿಯೆ ವ್ಯಕ್ತಿ-ವ್ಯಕ್ತಿಗಳ ಸ್ಪಂದನಗಳಿಂದ ಉಂಟಾಗುತ್ತದೆ. ವಿಶ್ವಸ್ಪಂದನವು ವ್ಯಕ್ತಿಸ್ಪಂದನಗಳ ಮೊತ್ತ. ಹಾಗಾಗಿ ಸಮಾಜದಲ್ಲಿ ನಡೆಯುವ ಒಳಿತು ಕೆಡಕುಗಳೆರಡಕ್ಕೂ ಪ್ರತಿಯೊಬ್ಬ ವ್ಯಕ್ತಿಯೂ ಜವಾಬ್ದಾರಿ — ಎಂದು ಅವರು ಅಭಿಪ್ರಾಯಪಡುತ್ತಾರೆ.

ಸ್ವಾಮಿ ವಿವೇಕಾನಂದರ ಪ್ರಕಾರ, ನಾವು ಒಳ್ಳೆಯ ಅಥವಾ ಕೆಟ್ಟ ಆಲೋಚನೆಗಳನ್ನು ಮಾಡಿದರೆ ಅವುಗಳ ತೀವ್ರತೆಗನುಗುಣವಾಗಿ ಹೊರಗಿನ ಒಳ್ಳೆಯ ಅಥವಾ ಕೆಟ್ಟ ಸ್ಪಂದನಗಳನ್ನು ಒಳಗೆ ಸೆಳೆದುಕೊಳ್ಳುತ್ತೇವೆ. ಇದರಿಂದಾಗಿ ನಾವು ಹೆಚ್ಚು ಒಳ್ಳೆಯವರೊ ಕೆಟ್ಟವರೊ ಆಗುತ್ತೇವೆ. ಆದ್ದರಿಂದ ನಾವು ಎಂತಹ ಆಲೋಚನೆಗಳನ್ನು ಪೋಷಿಸುತ್ತೇವೆ ಎಂಬುದರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಅವರು ಎಚ್ಚರಿಕೆ ನೀಡುತ್ತಾರೆ. ಆದ್ದರಿಂದ ಸತ್ಸಂಗ ಬಹುಮುಖ್ಯವಾದುದು. ಈ ಆಂತರಿಕ ಸತ್ಸಂಗಕ್ಕೆ ಪ್ರೇರಕವೂ ಪೋಷಕವೂ ಆದುದು ಬಾಹ್ಯ ಸತ್ಸಂಗ.


## ಶ್ರೀರಾಮಕೃಷ್ಣ ಶಾರದಾಶ್ರಮ

**ಪೊನ್ನಂಪೇಟೆ –571 216, ಕೊಡಗು ಜಿಲ್ಲೆ. ಫೋನ್: 08274–298244, 249555**

**srksevaponnampet@gmail.com Web: www.rkmponnampet.org**

## ಆಧ್ಯಾತ್ಮಿಕ ಶಿಬಿರ

**21–10–2018 ರಿಂದ 23–10–2018**

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ **9ನೇ** ವಾರ್ಷಿಕೋತ್ಸವದ ಪ್ರಯುಕ್ತ, **2018 ಅಕ್ಟೋಬರ್ 21 ರಿಂದ 23 ರವರೆಗೆ,** ಆಶ್ರಮದಲ್ಲಿ 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ರಾಘವೇಶಾನಂದಜಿ, ನಿತ್ಯಸ್ಥಾನಂದಜಿ, ಆತ್ಮಜ್ಞಾನಂದಜಿ ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

**ನೋಂದಣಿ ಶುಲ್ಕ : *ವಸತಿ ರಹಿತ :* ರೂ. 800/– *ವಸತಿ ಸಹಿತ :* ರೂ. 1500/–**

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15.10.2018**

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಗಾಗಿ ಆಶ್ರಮದ ವೆಬ್‌ಸೈಟ್ ನೋಡಿ.)

*ವಿ.ಸೂ: ಎಲ್ಲ ಕಾರ್ಯಕ್ರಮಗಳೂ ಆಶ್ರಮದಲ್ಲೇ ನಡೆಯುತ್ತವೆ. ಗೋಣಿಕೊಪ್ಪಲು ಕೂರ್ಗ್ ಪಬ್ಲಿಕ್ ಸ್ಕೂಲ್‌ನಲ್ಲಿ ಭಕ್ತರಿಗೆ ಅನುಕೂಲವಾಗುವಂತೆ ವಸತಿ ವ್ಯವಸ್ಥೆ ಮಾಡಲಾಗಿದೆ. 21.10.2018 ರಂದು 5.30ಕ್ಕೆ ಬೆಂಗಳೂರಿನಿಂದ ಪೊನ್ನಂಪೇಟೆಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಬಸ್ ಬುಕಿಂಗ್‌ಗಾಗಿ ಸ್ವಯಂಸೇವಕರಾದ ಶ್ರೀ ಕೆ.ವಿ. ಸುದರ್ಶನ್ ಕುಮಾರ್/ ರಾಜಣ್ಣ ಅವರನ್ನು ಸಂಪರ್ಕಿಸಿ: ಫೋ.ನಂ. 9845005273/ 8867725723*

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

*RTGSಗಾಗಿ ಬ್ಯಾಂಕ್ ವಿವರಗಳು:*
Sri Ramakrishna Sharadashrama, Ponnampet.
Corporation Bank, SB. A/c.no.520101041841472.
IFSC Code : CORP0000032 (ಪತ್ರ ಅಥವಾ ಇ-ಮೇಲ್ ಮೂಲಕ ವಿವರಗಳನ್ನು ತಿಳಿಸಿ.)

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ಬೋಧಸ್ವರೂಪಾನಂದ**
ಅಧ್ಯಕ್ಷರು